**ದಿ: 04-07-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಎ ಟಿ ಬಿ ವಕೀಲರಿಂದ:**

1. ನನ್ನ ಹೆಸರು ಹೊನ್ನಮ್ಮ ಅಂತಾ ಇದ್ದು, ಗಂಡನ ಮನೆಯಲ್ಲಿ ಪಾರ್ವತಿ ಅಂತಾ ಕರೆಯುತ್ತಾರೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ಕನ್ನಡ ಭಾಷೆಯಲ್ಲಿ ಇದೆ. ಅದರಲ್ಲಿ ಏನೂ ಬರೆದಿದ್ದಾರೆ ನನಗೆ ಗೊತ್ತಿಲ್ಲ. ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ಈ ದಾವೆಯನ್ನು ವಾದಿ ನಾಗರಾಜ ಇವರು ಅವರ ಮಲತಾಯಿ ಮಲ್ಲಮ್ಮ ಮತ್ತು ಅವರ 03 ಜನ ಮಕ್ಕಳ ಮೇಲೆ ಸಲ್ಲಿಸಿರುತ್ತಾನೆ. ನಾನು ವಾದಿಗೆ ಚಿಕ್ಕಮ್ಮ ಆಗಬೇಕು. ನನ್ನ ತಅಯಿ ಹೆಸರು ನಿಂಗಮ್ಮ, ತಂದೆಯ ರಂಗಯ್ಯ. ನನ್ನ ತಾಯಿ ಇವರಿಗೆ 6 ಜನ ಹೆಣ್ಣು ಮಕ್ಕಳು, ಗಂಗಮ್ಮ, ಹೊನ್ನಮ್ಮ, ಜಯಮ್ಮ, ಅನ್ನಪೂರ್ಣ, ಮರೆಮ್ಮ, ಪದ್ದಮ್ಮ, ನಮ್ಮ ತಂದೆಗೆ ಗಂಡು ಮಕ್ಕಳಿರುವುದಿಲ್ಲ ನನ್ನ ತಂದೆ ತಾಯಿ ತೀರಿಕೊಂಡಿರುತ್ತಾರೆ. ನನ್ನನ್ನು ಸಮುದ್ರ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ ಎಷ್ಟು ವರ್ಷಗಳ ಹಿಂದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಕ್ಕ ತಂಗಿಯರು ಮದುವೆ ಮಾಡಿಕೊಂಡು ಅವರವರ ಗಂಡನ ಮನೆಯಲ್ಲಿ ವಾಸ ಮಾಡಿಕೊಂಡಿದ್ದಾರೆ.

2. ವಾದಿ ನಾಗರಾಜನ ತಾಯಿ ನನಗೆ ಸ್ವಂತ ಅಕ್ಕಳಾಗಬೇಕು. ಅವರು ಯಾವ ಊರಿನಲ್ಲಿದ್ದಾರೆ ಗೊತ್ತಿಲ್ಲ. ವಾದಿ 2 ವರ್ಷದವನಿದ್ದಾಗ ಅವರ ತಾಯಿ ಮದುವೆ ಮಾಡಿಕೊಂಡು ದುಡಿಯಲು ಬೆಂಗಳೂರಿಗೆ ಹೋಗಿರುತ್ತಾಳೆ. ವಾದಿಯನ್ನು ಅವರ ಅಜ್ಜಿ ಬೆಳೆಸಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ತಂದೆ ಬೆಳಿಸಿದ್ದಾರೆ ಎನ್ನುತ್ತಾರೆ. ದಿನಾಂಕ: 11-01-2002 ರಂದು ನಿಮ್ಮ ತಾಯಿಗೆ 6 ಜನ ಹೆಣ್ಣು ಮಕ್ಕಳಿದ್ದು, ಹಾಗಾಗಿ ವಾದಿಯನ್ನು ಅವರ ಅಜ್ಜಿ ದತ್ತಕ ಪಡೆದುಕೊಂಡಿದ್ದಾರೆಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಜಮೀನುಗಳು ಇದ್ದು ನಾವು ಹೆಣ್ಣು ಮಕ್ಕಳು ಹಂಚಿಕೊಂಡಿದ್ದೇವೆ ಆ ಜಮೀನುಗಳ ಸರ್ವೆ

ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಿನಾಂಕ: 03-05-2011 ರಂದು ವಾದಿ 04 ಜಮೀನುಗಳಲ್ಲಿ ತನಗೆ ಭಾಗ ಕೊಡಿರಿ ಎಂದು ಅರ್ಜಿ ಹಾಕಿದ್ದ ಎಂದರೆ ಸುಳ್ಳು. ನಿಮ್ಮ ತಾಯಿ ನಿಂಗಮ್ಮ 04 ಜಮೀನುಗಳು ವಾದಿಗೆ ಸೇರಬೇಕೆಂದು ಪ್ರಮಾಣಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ದಿನಾಂಕ; 28-01-2013 ರಮದು ತಹಶೀಲ್ದಾರರು ದೇವದುರ್ಗ ಇವರು ಆದೇಶವನ್ನು ಮಾಡಿ ಅನ್ನಪೂರ್ಣ ಇವರಿಗೆ ಸ ನಂ 45 ರಲ್ಲಿ 04 ಎಕರೆ 29 ಗುಂಟೆ, ಇನ್ನೊಂದು ಸ ನಂ 45/2 ರಲ್ಲಿ 36 ಗುಂಟೆ, ಮತ್ತು ಮರಿಯಮ್ಮ ಗಂಡ ರಾಮಣ್ಣ ಇವರಿಗೆ ಸ ನಂ 45 ರಲ್ಲಿ 01 ಎಕರೆ 20 ಗುಂಟೆ, ಪದ್ಮಾ ಗಂಡ ಸುರೇಶ ಇವರಿಗೆ ಸ ನಂ 45 ರಲ್ಲಿ 01 ಎಕರೆ 20 ಗುಂಟೆ, ಹೊನ್ನಮ್ಮ ಗಂಡ ಶರಣಮ್ಮ ಇವರಿಗೆ ಸ ನಂ 45 ರಲ್ಲಿ 01 ಎಕರೆ 20 ಗುಂಟೆ, ಜಯಮ್ಮ ಗಂಡ ಬಸವಂತ್ರಾಯ ಇವರಿಗೆ ಸ ನಂ 45 ರಲ್ಲಿ 01 ಎಕರೆ 20 ಗುಂಟೆ, ವಾದಿ ನಾಗರಾಜ ಇವರಿಗೆ ಸ ನಂ 83/ಪಿ-2 ಇದರಲ್ಲಿ 04 ಎಕರೆ 25 ಗುಂಟೆ ಮತ್ತು ಸ ನಂ 80/3 ರಲ್ಲಿ 02 ಎಕರೆ 10 ಗುಂಟೆ ಜಮೀನು ಅವರ ಹೆಸರಿಗೆ ವರ್ಗಾವಣೆ ಮಾಡಿ ಆದೇಶಿಸದ್ದಾರೆಂದರೆ ಸರಿ. ಸದರಿ ಆದೇಶದ ಪ್ರತಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ನಿ ಡಿ 1 ಎಂದು ಗುರುತಿಸಲಾಯಿತು. ನಿಮ್ಮ ತಾಯಿ ನಿಂಗಮ್ಮ ಇವರು ವಾದಿಗೆ ದತ್ತಕ ಪಡೆದುಕೊಂಡು ಆತನ ಹೆಸರಿಗೆ ಎರಡು ಜಮೀನುಗಳನ್ನು ಬಿಟ್ಟುಕೊಟ್ಟಿರುತ್ತಾರೆ ಆ ಕಾರಣ ತಹಶೀಲ್ದಾರ ಆದೇಶ ಮಾಡಿದ್ದಾರೆಂದರೆ ಸರಿಯಲ್ಲ. ಈ ವಿಷಯ ನಿಮಗೆ ಗೊತ್ತಿದ್ದರೂ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

3. ಈ ದಾವೆಯನ್ನು ವಾದಿ ಗುಂಡುಗುರ್ತಿ ಸೀಮಾದ 04-00 ಎಕರೆ, 30 ಗುಂಟೆ ಜಮೀನುಗಳ ಮೇಲೆ ಮತ್ತು ದೇವದುರ್ಗ ಒಂದು ಪ್ಲಾಟಿನ ಮೇಲೆ ಸಲ್ಲಿಸಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ

ಇಷ್ಟೇ ಬರೆಸಿದ್ದೇನೆ. ದಾವಾ ಆಸ್ತಿಗಳು ಮೊದಲು ವಾದಿಯ ತಂದೆ ಹೊನ್ನಪ್ಪನಿಗೆ ಸೇರಿರುತ್ತವೆ. ವಾದಿಯ ತಂದೆ ಮತ್ತು ಅವರ ಸಹೋದರರು ಹಂಚಿಕೊಂಡು ಭಾಗ ಮಾಡಿಕೊಂಡ ಮೇಲೆ ಅವರಿಗೆ ಆಸ್ತಿ ಬಂದಿರುತ್ತದೆ. ವಾದಿಯ ತಂದೆ ಮತ್ತು ಅವರ ಚಿಕ್ಕಪ್ಪ ಭಾಗ ಮಾಡಿಕೊಂಡು ವಾದಿಯ ತಂದೆಗೆ 4-00 ಎಕರೆ ಮತ್ತು 30 ಗುಂಟೆ ಭಾಗ ಬಂದಿರುತ್ತದೆ. ಭಾಗ ಮಾಡಿಕೊಂಡು ಸುಮಾರು ಒಂದು ವರ್ಷವಾಗಿರುತ್ತದೆ. ನಾನು ನನ್ನ ಗಂಡನ ಊರಿನಿಂದ ಗುಂಡುಗುರ್ತಿಗೆ ಬಂದು ಹೋಗುವುದನ್ನು ಮಾಡುತ್ತೇನೆ. ನೀವು ಗಂಡನ ಮನೆಯಲ್ಲಿರುತ್ತಿರುವುದರಿಂದ ದಾವಾ ಆಸ್ತಿಗಳ ಬಗ್ಗೆ ಏನೂ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ